ಹರಾಮ್...." ಅಂದವನೇ ತೌಬಾ ತೌಬಾ ಅಂತ ಕೆನ್ನೆ ಬಡಿದುಕೊಂಡು "ನನ್ನ ಉಪವಾಸ ರಕ್ಷಿಸು ಅಲ್ಲಾಹನೇ ನನ್ನ ಶಬ್ದಗಳಲ್ಲಿ...'' ಎಂದು ನಾಟಕೀಯ ಶೈಲಿಯನ್ನು ಮುಂದುವರೆಸಿ ಇನ್ನಷ್ಟು ಕೀಟಲೆ ಮಾಡುತ್ತಾ, ''ಅದೇ... ಆ ದಾವೂದ್... ಯಾರನ್ನಾದರೂ ಕೊಲೆ ಮಾಡಿ ಅಲ್ಲಿ ಎಸೆದಿರಬಹುದು. ಬೆಳಗ್ಗೆ ಕಂಪ್ಲೇಂಟ್ ಮಾಡೋಣ, ಈಗ ಇಫ್ತಾರಿ ಮಾಡಿ..." ಎಂದ.

ಜೀನತ್‌ಗೆ ಮಿಂಚು ಹೊಡೆದಂತಾಯಿತು. ಹೌದೇ ಹೌದು! ಇಷ್ಟೊಂದು ಸರಳವಾದ ವಿಷಯ ತನಗೆ ಆಗಿನಿಂದ ಯಾಕೆ ಹೊಳೆಯಲಿಲ್ಲಾ... ಆಕೆ ಗಡಿಯಾರ ನೋಡಿದಳು – ಆರು ಹತ್ತು; ಇನ್ನೂ ಇಫ್ತಾರಿಗೆ ಇಪ್ಪತ್ತು ನಿಮಿಷ ಬಾಕಿ ಇದೆ. ಸರಸರನೆ ಹಿಂಬಾಗಿಲನ್ನು ತೆಗೆದು ಹೊರಬಂದು, ಅಂಗಳದ ದಕ್ಷಿಣ ದಿಕ್ಕಿನತ್ತ ಇದ್ದ ಜಗುಲಿಯತ್ತ ನಡೆದಳು. ಅಲ್ಲಂತೂ ವಾಸನೆಯೇ ವಾಸನೆ. ಸಾಕಷ್ಟು ಬೆಳಕಿತ್ತು. ಆಕೆ ಕೂಡಲೇ ಕುರ್ಚಿಯೊಂದನ್ನು ಹೊತ್ತು ತಂದು ಜಗುಲಿಯ ಮೇಲಿಟ್ಟಳು. ಜಗುಲಿಯಿಂದ ಕುರ್ಚಿಯ ಮೇಲೇರಿ, ಗೋಡೆಗೆ ಒತ್ತರಿಸಿ ನಿಂತು ಗೋಡೆಯಾಚೆ ಕಣ್ಣು ಹಾಯಿಸಿದಳು. ಕಣ್ಣಿಗೇನೋ ಗೋಚರವಾಗದಷ್ಟು ಪಾರ್ಥೇನಿಯಮ್, ಕಾಡುಬಳ್ಳಿಗಳು, ಲಂಟಾನ ಪೊದೆಗಳು, ಅಕ್ಕಪಕ್ಕದವರು ಎಸೆದಿದ್ದ ಕಸ... ಏನಿತ್ತು ಏನಿರಲಿಲ್ಲ ಅಲ್ಲಿ, ಆದರೆ... ದುರ್ವಾಸನೆಯ ಮೂಲ ಪತ್ತೆಯಾಗಿತ್ತು.

ಅನೀಸ್ ತಮಾಷೆಯಾಗಿ ಆಡಿದ್ದರೂ ಅವನ ಮಾತು ನಿಜವಾಗಿತ್ತು... ದಾವೂದ್‌ನ ಆ ಸೈಟು, ಪಾಳುಬಿದ್ದ ಮನೆಯಿಂದಲೇ ಆರಂಭವಾಗಿ ವ್ಯಾಪಿಸುತ್ತಿದ್ದ ಆ ದುರ್ಗಂಧ ಅಲ್ಲಿನದೇ ಎಂಬುದು ಖಚಿತವಾಗಿಬಿಟ್ಟಿತು. ಆ ಸತ್ಯ ಅವಳಿಗೆ ಮನವರಿಕೆಯಾಗುತ್ತಿದ್ದಂತೆಯೇ ಇಫ್ತಾರಿಯ... ಅಂತಹ ಪವಿತ್ರ ಹೊತ್ತಿನಲ್ಲಿಯೂ ದಾವೂದ್ ಕುರಿತಂತೆ ಅತ್ಯಂತ ಕೆಟ್ಟ ಶಾಪಗಳನ್ನು ತಡೆಯಲು ಅವಳಿಂದ ಸಾಧ್ಯವಾಗಲಿಲ್ಲ.

ಮೋರೆ ಕೆಂಪೇರಿಸಿಕೊಂಡು, ಅತ್ಯಂತ ಕೋಪೋದ್ರೇಕದಿಂದ ಒಳ ಬಂದ ಜೀನತ್‌ಳನ್ನು ಕಂಡು ಅವಳ ಗಂಡ, ''ಸಮಾಧಾನವಾಗಿ ಮೊದಲು ಇಫ್ತಾರಿ ಮಾಡು. ಆಗಬಾರದ್ದೇನೂ ಆಗಿಲ್ಲ. ಆಮೇಲೆ ನೋಡಿದರಾಯಿತು" ಎಂದು ಇನ್ನಷ್ಟು ಬೆಂಕಿಗೆ ತುಪ್ಪ ಸವರಿದ.

ಅವಳು ಉಪವಾಸವಿರದಿದ್ದಲ್ಲಿ ಮತ್ತು ಅವಳ ಸೊಸೆಯಂದಿರು ಅಲ್ಲಿ ಇರದಿದ್ದಲ್ಲಿ ಅವಳು ಗಂಡನ ಗ್ರಹಚಾರ ಬಿಡಿಸುತ್ತಿದ್ದಳು. ಅವಳು ಬಾಯಿ ಬಿಡುವುದಕ್ಕೆ ಮೊದಲೇ, ಸಮೀಪದ ಮಸೀದಿಯಿಂದ ಮೈಕ್‌ನಲ್ಲಿ, 'ಇದೀಗ ಇಫ್ತಾರ್ ಮಾಡಿ... ಅಲ್ಲಾಹುಮ್ಮ ಲಕಾ ಸುಮ್‌ತು ವ ಬಿಕಾಮಂತು ವ ಅಲೈಕ ತವಕ್ಕಲ್ತು ಅಲಾರಿಸ್‌ಕಿಕ ಅಫ್ತರ್ತು ಫತ ಖಬ್ಬಿಲ್ ಮಿನ್ನಿ... (ಓ ಅಲ್ಲಾಹನೇ, ನಿನಗಾಗಿ ಉಪವಾಸವಿದ್ದೇನೆ ಮತ್ತು ನಿನ್ನಲ್ಲಿ ವಿಶ್ವಾಸವಿರಿಸಿದ್ದೇನೆ. ನೀನು ದಯಪಾಲಿಸಿದ ಆಹಾರದಲ್ಲಿ ಉಪವಾಸ ತೊರೆಯುತ್ತಿದ್ದೇನೆ. ನೀನು ಮನ್ನಿಸು)' ಎಂಬ ಸೂಚನೆ ಬಂದ ಕೂಡಲೇ ಎಲ್ಲರೂ ಸಾಮೂಹಿಕವಾಗಿ ಶರಬತ್ತಿನ ಲೋಟವನ್ನೆತ್ತಿ, ತುಟಿಗಿಟ್ಟರು.

ಹಿಂದೆ ಯಾವೊತ್ತೂ ಜೀನತ್‌ಳ ರೋಜಾ ಇಂಥ ಕೆಟ್ಟ ಸನ್ನಿವೇಶದಲ್ಲಿ ಮುಕ್ತಾಯವಾಗಿರಲಿಲ್ಲ. ಅವಳಿಗೇನೂ ಸೇರದಂತಾಗಿತ್ತು. ಆದರೂ ಒತ್ತಾಯ ಪೂರ್ವಕವಾಗಿ ಒಂದಿಷ್ಟು ಶರಬತ್ತು ಕುಡಿದು ಸಂಜೆಯ ನಮಾಜ್‌ಗೆ ಹೋದಳು. ನಮಾಜ್‌ನ ನಂತರ ಇಡೀ ಕುಟುಂಬ ಊಟಕ್ಕೆ ಸೇರಿತು. ಜೀನತ್ ಮಾತ್ರ ಒಂದು ತುತ್ತನ್ನೂ ಬಾಯಿಗಿಡಲಿಲ್ಲ. ಸಾದಿಕ್‌ನಂತೂ ತಾಯಿಯಂತೆ ಬೆಂಕಿಕೆಂಡ ಸ್ವಭಾವದಲ್ಲಿ.

"ಸುಮ್ಮನೆ ಊಟ ಮಾಡ್ತೀರೋ ಇಲ್ವೋ... ಇಡೀ ದಿನ ರೋಜಾ ಇದ್ದು, ಹೀಗೆ ಸೂಕ್ಷ್ಮವಾದರೆ ಹೇಗೆ... ಇಲ್ಲದಿದ್ರೆ... ಈಗ ನಿಮ್ಮನ್ನು ನರ್ಸಿಂಗ್ ಹೋಮ್‌ಗೆ ಕರಕೊಂಡು ಹೋಗಿ ಡ್ರಿಪ್ಸ್ ಕೊಡಿಸ್ತೀನಿ... ಅಷ್ಟೇ!" ಎಂದು ರೇಗಿದ.

ಹಿರಿಸೊಸೆ ಒಳ್ಳೆ ಖುರ್ಮಾ ತಯಾರಿಸಿದ್ದಳು. ಆದರೆ ಆ ಕೊಳೆತ ದುರ್ವಾಸನೆ ಅವಳ ಹಸಿವನ್ನೇ